**ಪ್ರಧಾನ ಪ್ರಥಮ ವರ್ಗ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ, ಸಾ: ಗೋಕಾಕ**

**ಸಿ.ಸಿ. ನಂಬರ 1467/2010**

**ದೋಷಾರೋಪಣೆ**

ನಾನು ಶ್ರೀಯುತ ಮಂಜುನಾಥ ಡಿ.ಆರ್.,
ಬಿ.ಎಸ್‌ಸಿ. ಎಲ್.ಎಲ್.ಬಿ.
ಪ್ರಧಾನ ಜೆಎಂಎಫ್‌ಸಿ ನ್ಯಾಯಾಧೀಶರು, ಗೋಕಾಕ.

ಆರೋಪಿತರಾದ : 1) ರಾಜಮಾ ಅಲ್ಲಿಸಾಬ ಕರ್ನಾಚಿ (ಎ-3)
ಸಾ: ಯರಗಟ್ಟಿ, ತಾ: ಸವದತ್ತಿ.
2) ನಾನಾಸಾಬ ಅಲ್ಲಿಸಾಬ ಕರ್ನಾಚಿ (ಎ-4)
ಸಾ: ಯರಗಟ್ಟಿ, ತಾ: ಸವದತ್ತಿ.
3) ಉಮರಸಾಬ ಅಲ್ಲಿಸಾಬ ಕರ್ನಾಚಿ (ಎ-5)
ಸಾ: ಯರಗಟ್ಟಿ, ತಾ: ಸವದತ್ತಿ.
4) ರಾಮಲಿಂಗ ಮಲ್ಲಪ್ಪ ಬಳಿಗಾರ (ಎ-6)
ಸಾ: ಬಿಲ್ಲಕುಂದಿ, ತಾ: ಗೋಕಾಕ.
5) ಶಿವಲಿಂಗ ಮಲ್ಲಪ್ಪ ಬಳಿಗಾರ (ಎ-7)
ಸಾ: ಬಿಲ್ಲಕುಂದಿ, ತಾ: ಗೋಕಾಕ.
6) ಮಲ್ಲಿಕಸಾಬ ರಾಜೇಸಾಬ ನಗಾರ್ಚಿ (ಎ-8)
ಸಾ: ಕೌಜಲಗಿ, ತಾ: ಮುಧೋಳ.
7) ಅಕ್ಬರ ಲಾಲಸಾಬ ಮುಲ್ಲಾನಿ (ಎ-10)
ಸಾ: ಕೌಜಲಗಿ, ತಾ: ಮುಧೋಳ.

ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆ,

ದಿ:4-6-2008 ರಂದು 15-56 ಗಂಟೆಗೆ ಗೋಕಾಕ ಶಹರ ಪೋಲೀಸ್ ಠಾಣಾ ಹದ್ದಿಯಲ್ಲಿ ಬರುವ ಹಿರಿಯ ಉಪನೋಂದಣಿ ಅಧಿಕಾರಿ, ಗೋಕಾಕ ಇವರ ಕಾರ್ಯಾಲಯದಲ್ಲಿ ಆರೋಪಿತರಾದ ನೀವು ಫಿರ್ಯಾದಿ ಹಾಗೂ ಸಕೀನಾಬಿ ಉಮರಸಾ ಕರ್ನಾಚಿ ಇವರಿಗೆ ಮೋಸ ಮಾಡುವ ಉದ್ದೇಶದಿಂದ ಆರೋಪಿ 1 ಇವಳು ನಾನೇ ಸಕೀನಾಬೀ ಉಮರಸಾ ಕರ್ನಾಚಿ ಮತ್ತು ಆರೋಪಿ 2 ಇವಳು ನಾನೇ ಮೈರಾಜಬೀ ತಾಜುದ್ದೀನ ಹಳಿಂಗಳಿ ಇರುತ್ತೇನೆ ಅಂತಾ ನಟಿಸಿ ಕೌಜಲಗಿ ಗ್ರಾಮದಲ್ಲಿನ ರಿ.ಸ. ನಂಬರ 248/2 ಕ್ಷೇತ್ರ 5 ಎಕರೆ 10 ಗುಂಟೆ ಜಮೀನನ್ನ ಹೆಬ್ಬಟ್ಟಿನ ಗುರುತುಗಳನ್ನ ಹಾಕಿ ಛಾವಚಿತ್ರ ತೆಗೆಸಿಕೊಂಡು ಹಾಗೂ ಆರೋಪಿ 3, 4, 5 ನೀವು ನಿಮಗೆ ಸದರಿ ಜಮೀನು ತಮ್ಮದಲ್ಲ ಎಂದು ಗೊತ್ತಿದ್ದರೂ ಖರೀದಿ ಪತ್ರಕ್ಕೆ ಸಹಿ ಮಾಡಿ ಛಾವಚಿತ್ರ ತೆಗೆಸಿಕೊಂಡು ಹಾಗೂ ಮೃತ ಆರೋಪಿ 8 ಮತ್ತು ಆರೋಪಿ 10 ನೀವು ಅಮೀನಾಬಿ ಮತ್ತು ಆಶಾಬೀ ಇರುತ್ತಾರೆ ಎಂದು ಗೊತ್ತಿದ್ದರೂ ಕೂಡ ಇವರೇ ಮೈರಾಜಬೀ ಮತ್ತು ಸಕೀನಾಬಿ ಅಂತಾ ಗುರುತುಬಲ್ಲವರು ಎಂದು ಸದರಿ ಖೊಟ್ಟಿ ಪತ್ರಕ್ಕೆ ಸಹಿ ಮಾಡಿ ಮತ್ತು ಆರೋಪಿ 6 ಮತ್ತು 7 ನೀವು ನಿಜವಾದ ಮಾಲೀಕರು ಯಾರು

ಅಂತಾ ಗೊತ್ತಿದ್ದರೂ ಉಳಿದ ಆರೋಪಿತರಿಗೆ ಕೂಡಿಸಿಕೊಂಡು ಮೃತ ಆರೋಪಿ 1 ಮತ್ತು 2 ರವರಿಗೆ ಖೊಟ್ಟಿ ಖರೀದಿಪತ್ರ ಸೃಷ್ಟಿಸಿ ಮೋಸ ಮಾಡಿ ಅಪರಾಧ ಕಲಂ 420 ಸಹ ಕಲಂ 149 ಐಪಿಸಿ ರಡಿ ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ಸ್ಥಳ, ದಿನಾಂಕ ಮತ್ತು ವೇಳೆಯಲ್ಲಿ ಆರೋಪಿತರಾದ ನೀವು ಫಿರ್ಯಾದಿ ಹಾಗೂ ಸಕೀನಾಬಿ ಉಮರಸಾ ಕರ್ನಾಚಿ ಇವರಿಗೆ ಮೋಸ ಮಾಡುವ ಉದ್ದೇಶದಿಂದ ಸದರಿ ಸರ್ವೆ ನಂಬರದ ಖೊಟ್ಟಿ ದಾಖಲೆ ತಯಾರಿಸಿ ಅಪರಾಧ ಕಲಂ 419 ಸಹ ಕಲಂ 149 ಐಪಿಸಿ ರಡಿ ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ಸ್ಥಳ, ದಿನಾಂಕ ಮತ್ತು ವೇಳೆಯಲ್ಲಿ ಆರೋಪಿ 3, 4, 5 ನೀವು ನಿಮಗೆ ಸದರಿ ಜಮೀನು ತಮ್ಮದಲ್ಲ ಎಂದು ಗೊತ್ತಿದ್ದರೂ ಖರೀದಿಪತ್ರಕ್ಕೆ ಸಹಿ ಮಾಡಿ ಭಾವಚಿತ್ರ ತೆಗೆಸಿಕೊಂಡು ಹಾಗೂ ಮೃತ ಆರೋಪಿ 8 ಮತ್ತು ಆರೋಪಿ 10 ನೀವು ಅಮೀನಾಬಿ ಮತ್ತು ಆಶಾಬೀ ಇರುತ್ತಾರೆ ಎಂದು ಗೊತ್ತಿದ್ದರೂ ಕೂಡ ಇವರೇ ಮೈರಾಜಬೀ ಮತ್ತು ಸಕೀನಾಬಿ ಅಂತಾ ಗುರುತುಬಲ್ಲವರು ಎಂದು ಸದರಿ ಖೊಟ್ಟಿ ಪತ್ರಕ್ಕೆ ಸಹಿ ಮಾಡಿ ಮತ್ತು ಆರೋಪಿ 6 ಮತ್ತು 7 ನೀವು ನಿಜವಾದ ಮಾಲೀಕರು ಯಾರು ಅಂತಾ ಗೊತ್ತಿದ್ದರೂ ಉಳಿದ ಆರೋಪಿತರಿಗೆ ಕೂಡಿಸಿಕೊಂಡು ಮೋಸ ಮಾಡಿ ಸದರಿ ಜಮೀನನ್ನ ತಮ್ಮ ಹೆಸರಿಗೆ ಖೊಟ್ಟಿ ಖರೀದಿ ಮಾಡಿಕೊಂಡು ಅಪರಾಧ ಕಲಂ 465, 468 ಸಹ ಕಲಂ 149 ಐಪಿಸಿ ರಡಿ ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ಸ್ಥಳ, ದಿನಾಂಕ ಮತ್ತು ವೇಳೆಯಲ್ಲಿ ಆರೋಪಿತರಾದ ನೀವು ಮೃತ ಆರೋಪಿ 1 ಇವಳು ನಾನೇ ಸಕೀನಾಬೀ ಉಮರಸಾ ಕರ್ನಾಚಿ ಮತ್ತು ಮೃತ ಆರೋಪಿ 2 ಇವಳು ನಾನೇ ಮೈರಾಜಬೀ ತಾಜುದ್ದೀನ ಹಳಿಂಗಳಿ ಇರುತ್ತೇನೆ ಅಂತಾ ನಟಿಸಿ ಉಳಿದ ಆರೋಪಿತರು ಕೂಡಿಕೊಂಡು ಅವರಿಗೆ ಖೊಟ್ಟಿ ದಾಖಲೆ ತಯಾರಿಸಿ ಸಹಿಗಳನ್ನು ಹಾಕಿ ಅದನ್ನೇ ನಿಜವಾದ ದಾಖಲೆಗಳೆಂದು ತೋರಿಸಿ ಸರ್ಕಾರಕ್ಕೆ ಮೋಸ ಮಾಡಿ ಅಪರಾಧ ಕಲಂ 471 ಸಹ ಕಲಂ 149 ಐಪಿಸಿ ರಡಿ ಅಪರಾಧ ಮಾಡಿರುವಿರಿ.

ಸದರೀ ಅಪರಾಧಗಳು ಇದೆ ನ್ಯಾಯಾಲಯದ ವ್ಯಾಪ್ತಿಯಲ್ಲಿ ಬರುವದರಿಂದ ಅವು ನನ್ನಿಂದ ವಿಚಾರಣೆ ಆಗುತ್ತವೆ ಎಂದು ತಿಳಿಯಬಯಸುತ್ತೇನೆ.

ಸ್ಥಳಃ ಗೋಕಾಕ
ದಿಃ-06-08-2016

ಪ್ರಧಾನ ಪ್ರ.ವ.ನ್ಯಾ.ದಂ., ಗೋಕಾಕ.

<u>ಪ್ರಧಾನ ಪ್ರಥಮ ವರ್ಗ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ, ನಾ: ಗೋಕಾಕ .</u>

ಸಿ.ಸಿ.ನಂ.1467/2010

ಆರೋಪಿತನ ಹೆಸರು : ಅಕ್ಬರ ಲಾಲಸಾಬ ಮುಲ್ತಾನಿ (ಎ-10)

ವಯಸ್ಸು : 51 ವರ್ಷ

ಉದ್ಯೋಗ :

ವಾಸ : ಕೌಜಲಗಿ, ತಾ: ಮುಧೋಳ

## <u>ಆಪಾದನೆ</u>

ಪ್ರ: 1 :ನಿನಗೆ ಮೇಲೆ ಓದಿ ಹೇಳಿದ ಆಪಾದನೆ ತಿಳಿಯಿತೆ?

ಉ :

ಪ್ರ: 2 : ನೀನು ಗುನ್ಹಾ ಕಬೂಲಿ ಆಗುವಿಯೋ ಅಥವಾ ವಿಚಾರಣಾ ಆಗಬೇಕೋ?

ಉ :

(ಮೇಲಿನ ಆಪಾದನೆಯನ್ನು ಆರೋಪಿಗೆ ಓದಿ ಹೇಳಿ ಅವನಿಂದ ಬಂದ ಉತ್ತರಗಳನ್ನು ನನ್ನ ಸ್ವಅಕ್ಷರಗಳಲ್ಲಿ ಬರೆದುಕೊಂಡೆ ಅಂತಾ ದೃಢೀಕರಿಸುತ್ತೇನೆ)

ಸ್ಥಳ: ಗೋಕಾಕ.
ದಿ: 06-08-2016 ಪ್ರಧಾನ ಪ್ರ.ವ. ನ್ಯಾ. ದಂ., ಗೋಕಾಕ.